ಪೋಲೀಸಿನವರಿಗೆ ದೂರು ಕೊಟ್ಟು ೧೦-೧೫ ದಿವಸಗಳಾದರೂ ಸಹ ಆ ಜಾಗಕ್ಕೆ ಹೋಗದೆ ತನಿಖೆಯನ್ನು ಮಾಡದೆ ಸುಮ್ಮನಾಗಿದ್ದಾರೆ. ಈ ಕೊಲೆ ಒಂದು ಸಂಶಯಾಸ್ಪಾದವಾದುದು. ಕೊಲೆ ಮಾಡಿದಂತಹ ವ್ಯಕ್ತಿಗಳು ಅದೇ ಊರಿನಲ್ಲಿ ಹೆದರಿಕೆಯಿಂದ ತಿರುಗಾಡುತ್ತಿದ್ದರು. ಅವರು ಅಲ್ಲಿಯೇ ಇದ್ದಾರೆಂದು ಸಹ ಮಾಹಿತಿ ಬಂದಿದೆ. ಆದ್ದರಿಂದ ಈ ವಿಚಾರದಲ್ಲಿ ಕೂಲಂಕುಷವಾದಂಥ ತನಿಖೆಯನ್ನು ಮಾಡಿಸುವ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಇದನ್ನು ಸಿ. ಒ. ಡಿ ಗೆ ಒಪ್ಪಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ· ರಾಚಯ್ಯ.— ಮಾನ್ಯ ಅಧ್ಯಕ್ಷರೇ ನಾನು ನಿನ್ನೆಯ ದಿವಸ ಅವರ ಜೊತೆಯಲ್ಲಿ ಇದ್ದೆ, ಎರಡು ಸಂಶಯಾಸ್ಪಾದಕವಾದಂಥ ಕೊಲೆಗಳ ವಿಚಾರದಲ್ಲಿ ಸ್ಥಳ ಪರಿಶೀಲನೆ ಮಾಡಲು ಹೋಗಿದ್ದೆ. ಆಗ ಈ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ನಿನ್ನೆಯ ದಿವಸವೇ ವಿಚಾರ ಮಾಡಬಹುದಿತ್ತು. ಆದರೂ ಸಹ ಈಗ ಮಾನ್ಯ ಸದಸ್ಯರು ಸಿ. ಒ. ಡಿ. ಗೆ ಈ ವಿಚಾರವನ್ನು ಒಪ್ಪಿಸಬೇಕೆಂದು ಹೇಳಿದ್ದಾರೆ. ನಾನು ಈ ವಿಚಾರವನ್ನು ಸಿ. ಒ. ಡಿ. ಗೆ ಒಪ್ಪಿಸುತ್ತೇನೆ.

ಪ್ರಕಟಣೆಗಳು

Mr. Speaker.--

I have received a message from Dr. Balram Jakhar Hon'ble Speaker Loksabha and Chairman of the Executive Committee. Common-Wealth Parlimentary Association, which is as followes:—

COMMON WEALTH DAY MESSAGE

9 MARCH 1987

The Commonwealth family is a unique organization in terms of international cooperation and international living. Besides the United Nations and non-aligned movement, the Commonwealth is the largest and the most representive forum of nations. With its membership today spanning six continents and seven ocens, embracing more than a third of the world's population, it serves as a bridge between races, cultures, countries and continents. This voluntary organization of nations not only serves their interests, but also contributes towards the evolution of an international order promoting global peace, harmony and progress.

Over the years the Commonwealth has built up a network of institutions for mutual cooperation and consultation at all levels and in all spheres. At the parliamentary level the Commonwealth Parliamentary Association seeks to promote Commonwealth understanding and respect for parliamentary institutions. It provides a forum to the Legislators from the Commonwealth countries to discuss and sort out the problems afflicting contemporary society.

Today, this Commanwealth Day gives us the opportunity of pledging ourselves to rid our world of poverty, ignorance and injustice and to do our best for the promotion of world peace and prosperity. We will continue to strengthen our fraternal organiz-

ation based on mutual understanding and respect in order to meet the challenges of today's society more effectively.

The Commonwealth is worthy of our deepest commitment and our strongest support.

ವಿತ್ತೀಯ ಕಾರ್ಯಕಲಾಪಗಳು

೧೯೮೭–೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ ಸಂಖ್ಯೆ–೯ ಮುದ್ರಣ ಮತ್ತು ಲೇಖನ ಸಾಮಗ್ರಿಗಳು

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಪೆಚ್ಚಿವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೯೮,೦೦,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : ೧೦ — ಉಚ್ಚ ಶಿಕ್ಷಣ

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಪೆಚ್ಚಿವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೪,೧೧,೪೮೦೦೦ ರೂ ಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೦೦,೦೦೦ರೂ.ಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : ೧೩ — ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ಪೆಚ್ಚಿವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೦೪,೩೩,೨೪೦ ರೂ.ಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೦,೦೦೦ ರೂ.ಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಸಭೆಯ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

ಬೇಡಿಕೆ ಸಂಖ್ಯೆ ೧೪ — ಪ್ರೌಢ ಶಿಕ್ಷಣ

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಸಚಿವರು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಪೆಚ್ಚಿವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೫,೮೯,೦೦೦ ರೂ.ಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳಖಾತೆಯಲ್ಲಿ ೨,೦೦,೦೦೦ ರೂ.ಗಳಿಗಿಂತ ಮಿಂದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು

ಅಧ್ಯಕ್ಷರು.—ಈ ಮೇಲಿನ ಎಲ್ಲಾ ಬೇಡಿಕೆಗಳು ಸದನದ ಮುಂದೆ ಇವೆ. ಈಗ ಮಾನ್ಯ ಸದಸ್ಯರಾದಂಥ ಶ್ರೀ ಆರ್. ರಾಮಯ್ಯನವರು ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬಹುದು.

(ಮಾನ್ಯ ಸದಸ್ಯರಾದಂಥ ಆರ್. ರಾಮಯ್ಯನವರು ಗೈರು ಹಾಜರಾಗಿದ್ದರು)